ಶ್ರೀ ಎಂ. ವಿ. ಕೃಷ್ಣಪ್ಪ.—ಬಹಳ ದಿನಗಳಿಂದ ಬಂದಿವೆ. ಅಚ್ಚಂಪುರ ಮತ್ತು ಸುತ್ತಮುತ್ತಲಿನವರು ಸಾಗವಳಿ ಮಾಡುವವರಿಗೆ ಹಂಚಬೆ ಕಂದಾಯ ಕೇಳುತ್ತಿದ್ದಾರೆ. ಈಗ ಅಚ್ಚಂಪುರದ ಅಮೃತ ಮಹಲ್ ಫಾರಂನಲ್ಲಿ ಸುಮಾರು 1,300 ದನಗಳಿವೆ. ಅವಕ್ಕೆ ಈಗಿರುವ ಭತ್ತವು ಬೇಕಾಗಿದೆ. ಆದರೆ ಆ ದನಗಳ ಸಂಖ್ಯೆಯನ್ನು ಅರ್ಧಕ್ಕೆ ಕಡಮೆಮಾಡಿ ಸಾಧ್ಯವಾದಷ್ಟು ಜಮೀನನ್ನು ಸಾಗುವಳಿಗೆ ಕೊಡಬೇಕೆಂಬ ಯೋಜನೆ ಇದೆ.

ಶ್ರೀ ಟಿ. ಆರ್. ಪರಮೇಶ್ವರ ಅಯ್ಯ.—ಬಗ್ಗವಳ್ಳಿ ಕಾವಲನ್ನು ಹಿಂದೆ ರಿಸರ್ವ್ ಮಾಡಿರುವುದು ಗೊತ್ತಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೊತ್ತಿದೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಆ ಕಾವಲನ್ನು ತೆರಿಗೆಗಾಗಿ ರಿಸರ್ವ್‌ಮಾಡಿಕೊಂಡ ದನಗಳಿಗೆ ಮೇಯಲು ಅವಕಾಶ ಕೊಡುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗಿದ್ದರೆ ತೊಂದರೆ ಮಾಡುವಾರದೆಂದು ಅಧೀನರುಗಳಿಗೆ ತಿಳಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದನಗಳನ್ನು ಸಾಕುತ್ತಿರುವುದರಿಂದ ರಾಜ್ಯಕ್ಕೆ ಲಾಭವಾಗುತ್ತಿದೆಯೋ ಅಥವಾ ದನ ಮಾರಿ ರೈತರಿಗೆ ಜಮೀನನ್ನು ಕೊಟ್ಟರೆ ಹೆಚ್ಚು ಲಾಭ ಬರುತ್ತಿದೆಯೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ರಾಜ್ಯಕ್ಕೆ ನಷ್ಟದ ಪ್ರಶ್ನೆಯಲ್ಲ. ಇಡೀ ಹಿಂದೂಸ್ಥಾನದಲ್ಲಿ ಅಮೃತಮಹಲ್ ತಳಿ ಬಹಳ ಉತ್ತಮವಾದದ್ದೆಂದು ಪರಿಗಣಿಸಲಾಗಿದೆ. ಜೀಪುಗಳು ಸರ್ವಿಸ್‌ಗೆ ಬರುವ ಹಾಗೆ ಅಮೃತಮಹಲ್ ತಳಿಗಳು ಯುದ್ಧಕಾಲದಲ್ಲಿ ಹಿಂದೆ ಫಿರಂಗಿಗೆ ಎಳೆಯುವಾಗ ರೋಷಾವೇಶದಿಂದ ಮುನ್ನುಗ್ಗುತ್ತಿದ್ದವು. ಆದುದರಿಂದ ಅಂಥ ದನಗಳನ್ನು ಕಳೆದುಕೊಳ್ಳಬಾರದು, ಅವನ್ನು ಒಳ್ಳೆಯ ಸ್ಥಿತಿಯಲ್ಲಿಡಬೇಕು ಎಂದು ಮೈಸೂರು ಸರ್ಕಾರ ಸುಮಾರು 3 ಸಾವಿರ ದನಗಳನ್ನು ತಂದು ರೈತರಿಗೆ ಹಂಚುತ್ತಿದೆ. ಆದರೆ ಈಗಿರುವುದು ಜಾಸ್ತಿ ಎಂದು ಭಾವಿಸಿರುವುದರಿಂದ ಅರ್ಧ ಇಟ್ಟುಕೊಂಡು ಉಳಿಯುವ ಜಮೀನನ್ನು ಸಾಗುವಳಿಗೆ ಕೊಡಬೇಕೆಂಬ ಉದ್ದೇಶವಿದೆ.

Distribution of Jaggery

*Q.—172. Sri E. NARAYANA COWDA (Bangarpet).—

Will the Government be pleased to state :—

(*a*) when the Jaggery Control Order was issued by Government;

(*b*) the arrangements made by them to distribute jaggery to each District;

(*c*) the quantity of jaggery distributed to each district since the said order was issued;

(*d*) whether they are aware that on account of this the price of jaggery in the State is increasing when compared with the price in the neighbouring States;

(*e*) the action taken by them to check the rise in price?

*A.—Sri M. V. KRISHNAPPA (Minister for Revenue).—

(*a*) 30th October 1963.

(*b*) There is no restriction for the movement of jaggery within the State. Jaggery is freely available in the open market at reasonable price. The question of distribution of jaggery to each district does not arise.

(*c*) Does not arise in view of reply to clause (*b*).

(*d*) No.

(SRI M. V. KRISHNAPPA)

(e) (i) In order to check the rise in the price of gur and to keep a watch over the gur and khandasari trade, the State Government has issued the Mysore Khandasari/Gur Dealers Licensing Order, 1963.

(ii) The Government of India have issued the Gur (Movement) Control Order, 1963, to regulate the inter-State movement of gur to bring down its price.

(iii) An allotment of 3,000 tonnes of gur was obtained from the neighbouring States during the month of November and December 1963 and January and February 1964 and sub-allocated to the needy districts.

ಶ್ರೀ ಇ. ನಾರಾಯಣಗೌಡ.—ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಟನ್ ಬೆಲ್ಲ ಉತ್ಪತ್ತಿಯಾಗುತ್ತಿದೆ ಮತ್ತು ಅವಶ್ಯಕತೆ ಇರುವುದೆಷ್ಟು?

ಶ್ರೀ ಎಂ. ವಿ. ಕೃಷ್ಣಪ್ಪ.—ಮೂರೂವರೆ ಲಕ್ಷ ಟನ್ ಉತ್ಪತ್ತಿ ಇದೆ, ಬೇಕಾಗಿರುವುದು 3 ಲಕ್ಷ 20 ಸಾವಿರ ಟನ್. 20 ಸಾವಿರ ಟನ್ ಸರ್ಪ್ಲಸ್ ಇದೆ ಎಂದು ರಫ್ ಎಸ್ಟಿಮೇಟ್ ಇದೆ.

ಶ್ರೀ ಇ. ನಾರಾಯಣಗೌಡ.—ಹೊರಗಡೆ ದೇಶಗಳಿಂದ ನಮ್ಮ ದೇಶಕ್ಕೆ ಬರಬಾರದೆಂದು ನಿರ್ಬಂಧ ಮಾಡಿರುವುದರಿಂದ ನಮ್ಮ ರಾಜ್ಯದಲ್ಲಿ ಬೆಲೆ ಜಾಸ್ತಿಯಾಗಲು ಕಾರಣವಾಯಿತಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಂಡಿಯಾ ಸರ್ಕಾರ ನಿರ್ಬಂಧ ಮಾಡಿತು, ನಾವು ಮಾಡಲಿಲ್ಲ, ಕಬ್ಬು ಬೆಳೆದವರು ಸಕ್ಕರೆ ಕಾರ್ಖಾನೆಗೆ ಕೊಡಬೇಕಾದ್ದನ್ನು ಕೊಡದೆ ಬೆಲ್ಲ ಮಾಡಲು ಪ್ರಾರಂಭಿಸಿದ್ದರಿಂದ ಸಕ್ಕರೆ ಕಾರ್ಖಾನೆಗೆ ಸರಬರಾಯಿ ಕಡಮೆಯಾಗಿ ಸಕ್ಕರೆ ಉತ್ಪತ್ತಿಯೂ ಕಡಮೆ ಆಯಿತು. ಇದರಿಂದ ಮಂಡ್ಯ ಸಕ್ಕರೆ ಕಾರ್ಖಾನೆ ಕೆಲಸವನ್ನು ಕೆಲವು ದಿವಸ ನಿಲ್ಲಿಸಿದರು. ಅದನ್ನು ನೋಡಿ ಇಂಡಿಯಾ ಸರ್ಕಾರದವರು ಕಂಟ್ರೋಲ್ ಮಾಡಿದರು. ಆಮೇಲೆ ಸಕ್ಕರೆ ಉತ್ಪತ್ತಿ ಜಾಸ್ತಿಯಾಯಿತು. ಮೈಸೂರು ಸಂಸ್ಥಾನದಲ್ಲಿ ಹೋದವರ್ಷ ಕಡಮೆಯಿದ್ದ ಸಕ್ಕರೆ ಉತ್ಪತ್ತಿ ಈ ವರ್ಷ ಜಾಸ್ತಿಯಾಗಿದೆ.

9-00 A.M.

Sri RAJA PID NAIK—Out of these 3,000 tons, how much is alloted to Gulbarga?

Sri M. V. KRISHNAPPA.—About 2,000 to 2,500 tons.

Sri SANJEEVANATH AIKALA.—What action has Government taken to prevent jagger from flowing into the illicit distillation factories in the villages?

Sri M. V. KRISHNAPPA.—We cannot stop it. That is why the jaggery prices have gone up.

ಶ್ರೀ ಆರ್. ಎಲ್. ಲಕ್ಷ್ಮೀಪತಿ.—ತಾವೀಗ ಬೆಲ್ಲದ ಬೆಲೆ 140 ರೂಪಾಯಿಗಳವರೆಗೆ ಏರಿ ಹೋಗಿತ್ತು ಎಂದು ಹೇಳಿದಿರಿ. ಆದರೆ ರೈತರು ಕಬ್ಬು ಬೆಳೆಯುವುದು ಹೆಚ್ಚಾಗಿದೆ ಎಂದು ಆರೆ ಮನೆಗಳಲ್ಲಿ ಬೆಲ್ಲವನ್ನು ಮಾಡಿಟ್ಟಿರುವುದರ ರೇಟು ಬಹಳವಾಗಿ ಇಳಿದು ಹಾಳಾಗಿ ಹೋಗುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ನೀವು ಹೇಳುವ ಹಾಗೇನೂ ಪರಿಸ್ಥಿತಿ ಇಲ್ಲ. ಈ ಕಾನೂನು ತಂದದ್ದು ಕೇಂದ್ರ ಸರಕಾರ. ಇದನ್ನು ಎಲ್ಲ ಸಂಸ್ಥಾನಗಳೂ ಹಾರಿಗೆ ತರಬೇಕೆಂದು ಮತ್ತು ಪರ್ಮಿಟ್ಟುಗಳ ಮೇರೆ ಬೇರೆ ಕಡೆಗಳಿಗೆ ಹೋಗಬೇಕು ಎಂದು ಅವರು ಹೇಳಿದರು. ಇದರಲ್ಲಿ ನಾವು ಮಾಡುವುದು ಏನೂ ಇಲ್ಲ. ಕೆಲವು ಕಡೆಗಳಲ್ಲಿ ಬೆಲೆಗಳು ಇಳಿದಿವೆ. ನಮ್ಮ ಕಡೆ ಸಾಮಾನ್ಯವಾಗಿ ಆರೆ ಮನೆಗಳು ಜನವರಿ ಫೆಬ್ರವರಿ ತಿಂಗಳುಗಳಲ್ಲಿ ಪ್ರಾರಂಭವಾಗುತ್ತವೆ. ಕಂಟ್ರೋಲು ಆಗದೆ ಇದ್ದರೆ ಇದರ ಬೆಲೆ ಇನ್ನೂ ಕಡಿಮೆಯಾಗುತ್ತಿತ್ತು. ಒಂದು ಕ್ವಿಂಟಲ್‌ಗೆ 140 ರೂಪಾಯಿ ಎಂದು ಅವರೇ ನಿಗದಿ ಮಾಡಿದ್ದಾರೆ. ಹಾಗೆ ಮಾಡದೇ ಇದ್ದಿದ್ದರೆ ಇದರ ಬೆಲೆ ಇನ್ನೂ ಕಡಿಮೆಯಾಗುವುದರಲ್ಲಿತ್ತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಲ್ಲ ಹೊರಗಡೆಗೆ ಜಾಸ್ತಿಯಾಗಿ ಹೋಗುತ್ತಿದೆ ಎಂದು ಹೇಳಿದಿರಿ. ಅದರಿಂದ ಇಲ್ಲಸಿಟ್ ಡಿಸ್ಟಿರೇಷನ್ನಿಗಾಗಿ ಎಷ್ಟು ಪ್ರಮಾಣದ ಬೆಲ್ಲ ಹೋಗುತ್ತಿದೆ ಎನ್ನುವುದಕ್ಕೆ ಸರಕಾರ ಏನಾದರೂ ಅಂಕಿ ಸಂಖ್ಯೆಗಳನ್ನು ಕಲೆಹಾಕಿಸಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲಸಿಟ್ ಡಿಸ್ಟಿಲೇಷನ್ನಿಗಾಗಿ ಬೆಲ್ಲ ಹೋಗುತ್ತಿದೆ ಎಂದು ಜನ ಹೇಳುತ್ತಾರೆ. ಸರಕಾರದವರು ಅಧಿಕಾರಯುತವಾಗಿ ಯಾವಾಗಲೂ ಹೇಳಿಲ್ಲ. ಎಲ್ಲಾದರೂ ನಾನು ಹೇಳಿದ್ದರೆ ಆಗ ಅದು ತಪ್ಪು ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ ಇಲ್ಲಸಿಟ್ ಡಿಸ್ಟಿಲೇಷನ್ನಿಗಾಗಿ ಬೆಲ್ಲ ಎಷ್ಟು ಹೋಗುತ್ತದೆ ಎನ್ನುವುದರ ಬಗ್ಗೆ ಅಂಕಿ ಅಂಶಗಳು ಸಿಕ್ಕುವುದಿಲ್ಲ.

ಶ್ರೀ ಜಿ. ರಾಮೇಗೌಡ.—ಬೆಲ್ಲದ ರೇಟು ಹೆಚ್ಚು ಕಡಮೆ ಎನ್ನುವುದನ್ನು ಸರಕಾರ ಯಾವ ಆಧಾರದ ಮೇಲೆ ಕಂಡು ಹಿಡಿಯುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಕ್ಕರೆ ಕಾರ್ಖಾನೆಗೆ ಕಬ್ಬು ಕೊಳ್ಳುವಾಗ ಟನ್ನು ಒಂದಕ್ಕೆ 50—60 ರೂಪಾಯಿಗಳಂತೆ ತೆಗೆದುಕೊಳ್ಳುತ್ತಾರೆ. ಅದರ ಮೇಲೆ ಇದು ಲಾಭದಾಯಕವಾದ ಬೆಲೆ ಎಂದು ಸಕ್ಕರೆ ಕಾರ್ಖಾನೆಯ ಬಳಿ ಇರುವ ಕಬ್ಬು ಬೆಳೆಯುವ ರೈತರೂ ಒಪ್ಪಿಕೊಂಡಿದ್ದಾರೆ. ಕಬ್ಬು ಟನ್ನು ಒಂದಕ್ಕೆ 60 ರೂಪಾಯಿನಂತಿದ್ದರೆ ಬೆಲ್ಲ 120 ರೂಪಾಯಿಗಳವರೆಗೆ ಬರುತ್ತಿತ್ತು.

ಶ್ರೀ ಕೆ. ಪಿ. ಗದಗ್.—ಯಾವ ಯಾವ ಸರಿಯ ಪ್ರಾಂತಗಳಿಗೆ ಬೆಲ್ಲವನ್ನು ಹಂಚುತ್ತಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ರಾಜ್ಯದಲ್ಲಿ ಎಷ್ಟು ಬೆಲ್ಲವಾಗುತ್ತದೆ ಎನ್ನುವುದನ್ನು ನೋಡಿಕೊಂಡು ಅಲಾಟ್‌ಮೆಂಟು ಮಾಡುತ್ತೇವೆ. ಗುಜರಾತು ಸರಕಾರಕ್ಕೆ ನಾವೆಲ್ಲ 1000 ಟನ್ನು ಬೆಲ್ಲ ತೆಗೆದುಕೊಳ್ಳಬಹುದು ಎಂದು ಕಾಗದ ಬರೆದುದಕ್ಕೆ ಅವರ ರಾಜ್ಯದ ವರ್ತಕರು ಪರ್ಮಿಟ್ಟನ್ನು ತೆಗೆದುಕೊಂಡು ಬಂದು ಇಲ್ಲಿಂದ ತೆಗೆದುಕೊಂಡು ಹೋಗುತ್ತಾರೆ. ಮಹಾರಾಷ್ಟ್ರದವರಿಗೆ 2000 ಟನ್ನುಗಳಷ್ಟು ಎಂದು ಹೇಳಿದ್ದೆವು. ಅಲ್ಲಿನ ವರ್ತಕರುಗಳೂ ಇಲ್ಲಿಗೆ ಬಂದು ಪರ್ಮಿಟ್ಟಿನ ಮೇಲೆ ತೆಗೆದುಕೊಂಡು ಹೋದರು. ಅದೇ ರೀತಿ ಮದರಾಸು ಹಾಗೂ ಆಂಧ್ರದ ಬಾರ್ಡರಿನಲ್ಲಿರುವ ಸ್ಟೇಟುಗಳಿಗೂ ಅಲಾಟುಮೆಂಟು ಮಾಡಿ ಪರ್ಮಿಟ್ಟಿನ ಮೂಲಕ ಜಿಲ್ಲಾಧಿಕಾರಿಗಳು ಬೆಲ್ಲ ಕಳುಹಿಸುತ್ತಿದ್ದಾರೆ.

ಶ್ರೀ ಎಸ್. ನಂಜೇಗೌಡ.—ಬೆಲ್ಲ ಮಾರಾಟ ಮಾಡುವ ರೈತರು 5 ರೂಪಾಯಿಗಳ ಶುಲ್ಕವನ್ನು ಮೊದಲೇ ಕೊಟ್ಟು ತೆಗೆದುಕೊಂಡು ಹೋಗುವುದಕ್ಕೆ ಬದಲಾಗಿ ಅವರಿಂದ ಬಾಂಡುಗಳನ್ನು ತೆಗೆದುಕೊಳ್ಳುವಂತೆ ಸರಕಾರ ಅವಕಾಶ ಮಾಡುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದಕ್ಕೆ ಇಂಡಸ್ಟ್ರಿ ಖಾತೆಯಿಂದ ಲೈಸನ್ಸು ಪಡೆಯಬೇಕು. ತಾವು ಅವರಿಗೆ ಬರೆದರೆ ಇದನ್ನು ಪರಿಶೀಲನೆ ಮಾಡಬಹುದು.

ಶ್ರೀ ಇ. ನಾರಾಯಣ ಗೌಡ.—ಕಾಸ್ಟ್ ಆಫ್ ಪ್ರೊಡಕ್ಷನ್ನಿಗಿಂತ ಬೆಲ್ಲದ ಬೆಲೆ ಕಡಿಮೆಯಾಗುತ್ತಿರುವುದರಿಂದ ರೈತರಿಗೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಲು ಒಂದು ನಿರ್ದಿಷ್ಟವಾದ ಬೆಲೆ ನಿಗದಿ ಮಾಡಬೇಕು ಎಂದು ಕೇಂದ್ರಕ್ಕೆ ತಿಳಿಸಲು ಸಾಧ್ಯವಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.— ನಮ್ಮ ಮೈಸೂರು ರಾಜ್ಯದ್ದು ಇದರಲ್ಲಿ ಏನೂ ಇಲ್ಲ. ನಾವು ಕಂಟ್ರೋಲಿಗೆ ವಿರೋಧವಾಗಿದ್ದೇವೆಂದು ಹೇಳಿ ಮೊದಲಿನಿಂದಲೂ ವಿರೋಧ ಮಾಡುತ್ತಿದ್ದೇವೆ. ಈ ರೀತಿ ಬೆಲೆಯನ್ನು ಹಾಕಬೇಡಿ, ಇದನ್ನು ಜಾರಿಗೆ ತರುವುದಕ್ಕಾಗುವುದಿಲ್ಲ, ಬ್ಲಾಕುಮಾರ್ಕೆಟ್ಟಿಗೆ ಅವಕಾಶವಾಗುತ್ತದೆ ಇಂತಹ ಅವ್ಯವಸ್ಥೆ ಮಾಡಬೇಡಿ ಎಂದು ಪದೇ ಪದೇ ಹೇಳುತ್ತಲೇ ಬಂದಿದ್ದೇವೆ. ಈಗ ಕೇಂದ್ರ ಸರಕಾರದವರು ಕೂಡ ಇದನ್ನು ಬೇಗ ತೆಗೆಯುವುದರಲ್ಲಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಪ್ರಾನೆ ಬೆಲ್ಲ ಎಷ್ಟು ಟನ್ನುಗಳಷ್ಟು ಈಗ ಉತ್ಪತ್ತಿಯಾಗುತ್ತಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಚಲು ಮರದಲ್ಲಿ ಹೆಂಡ ತೆಗೆದು ಕ್ರಿಸ್ಟರ್ ಷುಗರ್ ಎಂದರೆ ಕಲ್ಲನಕ್ಕರೆಯಂತಿರುವುದನ್ನು ಚಿಕ್ಕ ಜೋಗಿಹಳ್ಳಿಯಲ್ಲಿರುವ ಒಂದು ಫ್ಯಾಕ್ಟರಿಯಲ್ಲಿ ತಯಾರುಮಾಡುತ್ತಿದ್ದಾರೆ. ತಾಳೆಮರದಿಂದ ತಾಟೀ ಬೆಲ್ಲ ಎಂದು ಮಾಡುತ್ತಾರೆ ಇದನ್ನು ಆನೇಕ ಆಯುರ್ವೇದದ ಔಷಧಿಗಳಿಗೂ ಉಪಯೋಗಿಸುತ್ತಾರೆ. ತಮಗೂ ತಿಳಿದಿರಬಹುದು.

ಶ್ರೀ ಗೋಪಾಲರಾವ್ ಮುಡ್ಡಿ.—ನಮ್ಮ ರಾಜ್ಯದಿಂದ ಎಷ್ಟು ಬೆಲ್ಲ ಎಕ್ಸ್‌ಪೋರ್ಟ್ ಆಗುತ್ತಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು 3000 ಟನ್ನುಗಳಷ್ಟು ಇಂಪೋರ್ಟು ಮಾಡುತ್ತಿದ್ದೇವೆ. 12000 ಟನ್ನುಗಳಷ್ಟು ಎಕ್ಸ್‌ಪೋರ್ಟು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಕ್ಷೇತ್ರವಾದ ಬೆದರಿನಲ್ಲಿ ಕಬ್ಬು ಹೇರಳವಾಗಿ ಬೆಳೆಯುತ್ತದೆ. ಸುಮಾರು 30-35 ಸಾವಿರ ಟನ್ನುಗಳಷ್ಟು ಬೆಲ್ಲವಾಗುತ್ತದೆ. ಇದರಲ್ಲಿ ಅವರ ಜಿಲ್ಲೆಗೇ ಸುಮಾರು 8-9 ಸಾವಿರ ಟನ್ನುಗಳಷ್ಟು ಬೇಕು. ಇನ್ನುಳಿದ 20 ಸಾವಿರ ಟನ್ನುಗಳಷ್ಟು ಬೆಲ್ಲವನ್ನು ಬೀದರು ಜಿಲ್ಲೆಯಿಂದ ಹೊರಕ್ಕೆ ಕಳುಹಿಸಲು ಅವಕಾಶವಿದೆ.

Sri SANJEEVANATH AIKALA.—Is the Government aware that no jaggery is manufactured from the toddy tapped from palmirah trees ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಇದರ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡಬಹುದು.

ಶ್ರೀಮತಿ ಸುಶೀಲಾ ಬಾಯಿ ಹೀರಾಜಂವ್ ಪಾ.—ಗುಜರಾತಿಗೆ ಬೆಲ್ಲ ಕಳಿಸುತ್ತೀವೆಂದು ಹೇಳಿದಿರಿ, ಇದು ಬೆಳಗಾಂ ಜಿಲ್ಲೆಯವರಿಗಾಗಿ ಎಂದು ಕಳುಹಿಸರಾಗುತ್ತಿತ್ತೋ ? ಅಥವಾ ಗುಜರಾತು ರಾಜ್ಯಕ್ಕೋ ಕಳುಹಿಸುತ್ತಿರುವುದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಗುಜರಾತ್‌ಗೆ ಕಳುಹಿಸಿದುದು ಬೆಳಗಾಂ ಜಿಲ್ಲೆಗೋಸ್ಕರವಾಗಿ. ಆದರೆ ತಮ್ಮಂತಹವರು ಒದರೆ ಜಿಲ್ಲೆಯ ಬೆಲ್ಲ ಚೆನ್ನಾಗಿಲ್ಲ ಎಂದು ಹೇಳಿದರಿ ಎಂದು ತಿಳಿಸಿ ಬಂದುದರಿಂದ ಸ್ವಲ್ಪ ಕೊಂದರೆಯಾಯಿತು ಎಂದೂ ಗೊತ್ತಾಗಿದೆ.

ಶ್ರೀ ಎಸ್. ಶಿವಪ್ಪ.—ನಮ್ಮ ದೇಶದಲ್ಲಿ ಬೆಲ್ಲದ ಬೆರೆ ಅನಿಶ್ಚಿತವಾಗಿರುವುದರಿಂದ ಈ ಧಾರಣೆಯನ್ನು ಸರಿಯಾಗಿ ನಿಗದಿ ಮಾಡಿ ಬೆಲ್ಲ ಮಾಡುವ ರೈತರಿಗೆ ಅನುಕೂಲವಾಗುವಂತಹ ವಾತಾವರಣವನ್ನು ನಿರ್ಮಾಣ ಮಾಡಲು ಕಾಫೀ ಬೋರ್ಡ್ ಮಾಡಿರುವ ತೆ ಬೆಲ್ಲಕ್ಕೂ ಒಂದು ಮಾರ್ಕೆಟಿಂಗು ಬೋರ್ಡ್ ಒಂದನ್ನು ಸ್ಥಾಪನೆ ಮಾಡಿ ಒಂದು ನಿಗದಿಯಾದ ಧಾರಣೆಯನ್ನು ಗೊತ್ತುಮಾಡ ಮಂತೇ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಲ್ಲದ ಮಾರ್ಕೆಟ್ಟಿನ ಎಕ್ಸ್‌ಪೀರಿಯನ್ಸನ್ನು ಈಗ್ಗೆ ಮೂರು ವರ್ಷಗಳಿಂದಲೂ ನೋಡುತ್ತಿದ್ದೇವೆ. ರೈತನ ಕಷ್ಟ ಏನು ಎನ್ನುವುದು ಸರಕಾರಕ್ಕೆ ಗೊತ್ತಿದೆ. You will see that next year the gur prices will go up to an uneconomic level. The Government of India are seized of the need to achieve stability in the production of sugar and jaggery in the country. They are likely to appoint a Sugar Marketing Board. The Food Minister has announced it; but it has not been done.

ಮುಂದಿನ ವರ್ಷ ಬೆಲ್ಲದ ಬೆರೆ ಅಷ್ಟು ಏರುವುದಿಲ್ಲ ಎಂದು ನಾನು ಭಾವಿಸುತ್ತೇನೆ.

Defalcation of Materials like Cement, etc., in the Bangalore Division of Public Works Department.

*Q. - 253. Sri GANGADHARA NAMOSHI (Gulbarga).—

Will the Government be pleased to state :—

(*a*) whether it is a fact that in the Bangalore Division of Public Works Department (Stores) defalcation of materials like cement, etc., have taken place;

(*b*) the extent to the said loss;

(*c*) the persons who were in charge when the loss occurred;

(*d*) whether any enquiry is ordered ?

A.—Sri VEERENDRA PATIL (Minister for Public Works).—

(*a*) Yes.

(*b*) Cement ... Rs. 91,725.
Steel ... Rs. 1,32,960.

(*c*) Three Executive Engineers, one Assistant Engineer who acted as Executive Engineer for some time, one Accounts Superintendent, two Store Keepers and one Clerk.

(*d*) Yes.

ಶ್ರೀ ಗಂಗಾಧರ ನಾಮೋಷಿ.—(ಡಿ)ಗೆ ಉತ್ತರವಾಗಿ ಎನ್‌ಕ್ವೈರಿ ಮಾಡರಾಗಿದೆ ಎಂದು ಹೇಳಿದ್ದೀರಿ. ಅದು ಯಾವ ಸ್ಟೇಜಿನಲ್ಲಿದೆ ?